(i) ಬೆಂಗಳೂರಿನಲ್ಲಿ ಲಾರಿಯಲ್ಲಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆ ಬಗ್ಗೆ ನಿಯಮ ೫೩ಕ್ಕಿರ ಮೇರೆಗೆ

ಡಾ।। ವಿ. ಎಸ್. ಆಚಾರ್ಯ.—ಅಧ್ಯಕ್ಷರೇ, ನಿಯಮ ೫೩ಕ್ಕಿರ ಕೆಳಗೆ ನಾನು ಸಾರ್ವಜನಿಕರ ಪ್ರಾಮುಖ್ಯತೆ ಪಡೆದ ವಿಷಯದ ಬಗ್ಗೆ ನಾನು ಸರ್ಕಾರವ ಗಮನವನ್ನು ಸೆಳೆಯ ಬಯಸುತ್ತೇನೆ. ಮೊನ್ನೆ ೫ನೇ ತಾರೀಖು ರಾತ್ರಿ ಮಳೆ ಬರುತ್ತಿದ್ದ ಸಮಯದಲ್ಲಿ ಒಂದು ಲಾರಿ ಸಿರಸಿ ವೃತ್ತದಿಂದ ಬಿನ್ನಿಮಿಲ್ ಕಾಲೋನಿ ಕಡೆಗೆ ರಭಸವಾಗಿ ಹೋಗುತ್ತಿತ್ತು. ದಾರಿಯಲ್ಲಿ ಕೆಂಗೇರಿ ಗೇಟ್ ಪೋಲೀಸ್ ಸ್ಟೇಷನ್ನಿನ ಸಬ್ ಇನ್ಸ್‌ಪೆಕ್ಟರ್‌ನ್ನು ನೋಡಿದ ಲಾರಿ ಚಾಲಕ ಲಾರಿಯನ್ನು ಜೋರಾಗಿ ಓಡಿಸಿದ್ದರಿಂದ ಅದು ಆಯತಪ್ಪಿಯೇನೋ ಅದು ಅಲ್ಲಿ ವಿಾಸಲು ಪಡೆ ಕಾಂಪೌಂಡಿಗೆ ಡಿಕ್ಕಿ ಹೊಡೆದಿದೆ. ಆ ಲಾರಿಯ ಸಂಖ್ಯೆ ಎಂ.ವೈ.ಎಸ್. ೮೮೦೮ ಎಂದು ಅದರಲ್ಲಿ ಇದೆ. ಈ ಲಾರಿ ರಭಸದಿಂದ ಹೋದು ದ್ದರ ಬಗ್ಗೆ ಸಂಶಯಗೊಂಡು ಸಬ್ ಇನ್ಸ್‌ಪೆಕ್ಟರ್ ಅದರ ಹಿಂದೆ ಹೋಗಿ ಆ ಲಾರಿಯನ್ನು ನೋಡ ಲಾಗಿ ಅದರ ಒಳಗೆ ಸುಮಾರು ೬೦,೦೦೦ ರೂಪಾಯಿಗಳ ಬೆಲೆಬಾಳುವ ಕಳ್ಳಶರಾಬು ಇತ್ತೆಂದು ಗೊತ್ತಾಗಿದೆ. ಆ ಲಾರಿ ಗೋಡೆಗೆ ಡಿಕ್ಕಿ ಹೊಡೆದು ನಿಂತ ಮೇಲೆ ಅದರ ಚಾಲಕ ಮತ್ತು ಇತರ ಸಿಬ್ಬಂದಿಗಳು ಓಡಿಹೋಗಿದ್ದಾರೆ.

(ಶ್ರೀ ಪಿ. ರಾಮಚಂದ್ರದೇವ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಕೇವಲ ಒಂದೂವರೆ ವರ್ಷದ ಕೆಳಗೆ ಕಳ್ಳಭಟ್ಟಿ ಕುಡಿದು ಎಷ್ಟೋ ಜನ ಸತ್ತದ್ದನ್ನು ನಾವು ಇಲ್ಲಿ ಈಗ ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಈ ಕಳ್ಳ ಶರಾಬು ಎಲ್ಲಿಗೆ ಹೋಗಿ ಹೇಗೆ ವಿಶ್ರಾಣವಾಗಿ, ಆದು ನಂತರ ವಿಷವಾಗಿ ಎಷ್ಟು ಜನ ಸಾಯುತ್ತಿದ್ದರೋ ಗೊತ್ತಿಲ್ಲ. ಇದು ಅಲ್ಲಿ ಕಾಂಪೌಂಡ್‌ಗೆ ಡಿಕ್ಕಿ ಹೊಡೆಯಲಾಗಿ ವಿಷಯ ಹೊರಗೆ ಬಂತು. ಇಲ್ಲದಿದ್ದರೆ ಅದು ಹೊರಗೆ ಬರುತ್ತಿರಲಿಲ್ಲ. ಇಲ್ಲಿ ಸಬ್ ಇನ್ಸ್‌ಪೆಕ್ಟರ್ ಸಾಹಸದ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಅತನಿಗೆ ಇನಾಂ ಕೊಟ್ಟ ಬಗ್ಗೆ ವರದಿ ಯಾಗಿದೆ. ಈ ರೀತಿ ಅತನಿಗೆ ಇನಾಂ ಕೊಟ್ಟರೆ ಸಾಲದು. ಇದರ ಮೂಲ ಏನು ? ಯಾರು ಸರಬರಾಜು ಮಾಡುತ್ತಿದ್ದಾರೆ ? ಇದು ಎಲ್ಲಿಗೆ ಹೋಗಿ ತಲುಪುತ್ತಿತ್ತು ಎಂಬುದನ್ನೆಲ್ಲಾ ಕಂಡುಹಿಡಿಯಬೇಕಾಗಿದೆ. ಈಗ ಈ ಬಗ್ಗೆ ಇನ್ನೊಂದು ವಿಷಯ ಹೊರ ಬಂದಿದೆ. ಆ ಲಾರಿಯ ಛಾಸಿಯನ್ನು ಪರೀಕ್ಷಿಸಲಾಗಿ ಆರ್.ಟಿ.ಒ. ಅಧಿಕಾರಿಗಳಿಂದ ತಿಳಿದು ಬಂದ ವಿಷಯವನ್ನು ಹೇಳಬಯ ಸುತ್ತೇನೆ. ಈ ಲಾರಿಯ ಮೇಲೆ ''ಎಂ.ವೈ.ಎಸ್. ೮೮೦೮'' ಎಂದು ನಮೂದು ಆಗಿದ್ದರೂ ಇದರ ನಿಜವಾದ ಸಂಖ್ಯೆ ''ಎಂ.ವೈ.ಎಸ್. ೬೦೫೫'' ಆಗಿರುತ್ತದೆ. ಈ ಲಾರಿಯ ನಂಬರ್ ಪ್ಲೇಟ್ ಸಹಾ ಬದಲಾವಣೆ ಆಗಿ ಅದರಲ್ಲಿ ಬೇರೆ ನಂಬರ್ ಇರುತ್ತದೆ. ಆದ್ದರಿಂದ ಈ ಬಗ್ಗೆ ಸಮಗ್ರ ತನಿಖೆ ಆಗಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಷಯವನ್ನು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸು ತ್ತೇನೆ.

(ii) Irrigation from Nugu Project

ಶ್ರೀ ಎಂ. ಮಹದೇವ್.—ಮಾನ್ಯ ಸಭಾಪತಿಗಳೇ ನಂಜನಗೂಡು ತಾಲ್ಲೂಕು ಹಾಗೂ ಹೆಗಡದೇವನಕೋಟೆ ತಾಲ್ಲೂಕಿಗೆ ಸೇರಿದ ಹಾಗೆ ನುಗು ಜಲಾಶಯ ಇದೆ. ಇದರಿಂದ ಪ್ರತಿ ವರ್ಷವೂ ಅಲ್ಪಾವಧಿ ಹಾಗೂ ಅರೆ ಖುಷ್ಕಿ ಬೆಳೆಗೆ ನೀರು ಕೊಡುತ್ತಿದ್ದರು. ಅದೇ ರೀತಿ ಈ ವರ್ಷವೂ ಅರೆ ಖುಷ್ಕಿ ಬೆಳೆಗೆ ನೀರು ಕೊಡುತ್ತೇವೆ. ಆ ನೀರು ಕಡಿಮೆಯಾದರೆ ರೈತರೇ ಜವಾಬ್ದಾರರೆಂದೂ ಇದಕ್ಕೆ ಇಲಾಖೆಯೂ ಜಬ್ದಾರಿಯಾಗುವುದಿಲ್ಲವೆಂದು ದಿನಾಂಕ ೩೦-೮-೬೩ರಲ್ಲಿ ಪ್ರಕಟಣೆ ಹೊರಡಿಸಿದ್ದಾರೆ. ಆದರಂತೆ ೨೫ನೇ ತಾರೀಖು ನೀರು ಬಿಟ್ಟರು ನಾಲೆಯಲ್ಲಿ ನೀರು ಕೂಡ ಬಂತು. ೪ನೇ ತಾರೀಖಿನ ದಿವಸ ಇಲಾಖಾ ಅಧಿಕಾರಿಗಳಾದ ಮುಖ್ಯ ಇಂಜನಿಯರ್‌ರವರು, ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರು, ಕಾರ್ಯ ನಿರ್ವಾಹಕ ಅಭಿಯಂತರು, ಆಯಾಯಾ ಕ್ಷೇತ್ರದ ವಿಧಾನ ಸಭಾ ಸದಸ್ಯರ ತುರ್ತು ಸಭೆಯನ್ನು ಕರೆದು ನೀರು ನಿಲ್ಲಿಸಬೇಕಾಗುತ್ತದೆ. ಕೆಲವು ಕಡೆಯಲ್ಲಿ ನೀರು ಸಾಕಾಗುವುದಿಲ್ಲ ಎನ್ನುವ ದೂರು ಬಂದಿದೆಯೆಂದು ತಿಳಿಸಿದರು. ನಾನು ಆ ಸಭೆಯಲ್ಲಿ ಇದ್ದೆ. ರೈತ ಮುಖಂಡರುಗಳೆಲ್ಲಾ ಹೊರಗಡೆ ಇದ್ದರು. ಅಧಿಕಾರಿಗಳು ಭತ್ತಕ್ಕೆ ನೀರು ಕೊಡುವುದಕ್ಕಾಗುವುದಿಲ್ಲ. ಖುಷ್ಕಿ ಬೆಳೆಗೆ ಬಿಡುತ್ತೇವೆ, ಅದು ಕೂಡ ೧೫ ದಿವಸಕ್ಕೆ ಒದಂ